ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1554
ಸದಸ್ಯರ ಹೆಸರು	:	ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	19.03.2020
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ ಎಷ್ಟು ತಾಲ್ಲುಕುಗಳಿಗೆ ಕಾರಂಜಾ ಜಲಾಶಯದಿಂದ ನೀರು ನೀಡಲಾಗುತ್ತದೆ;	ಬೀದರ ಜಿಲ್ಲೆಯಲ್ಲಿ ಬರುವ ಕಾರಂಜಾ ಯೋಜನೆಯ ಜಲಾಶಯದಿಂದ ಮೂರು ತಾಲ್ಲೂಕುಗಳಿಗೆ ನೀರು ಒದಗಿಸಲಾಗುತ್ತಿದೆ.
ಆ)	ಯಾವ ಉದ್ದೇಶಕ್ಕೆ ನೀಡಲಾಗುತ್ತದೆ; ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಬೆಳೆಗೆ ನೀರು ಕೊಡಲಾಗುವುದು; ಅಥವಾ ಇನ್ನಿತರ ಬೆಳೆಗೆ ಎಷ್ಟು ಪ್ರದೇಶಕ್ಕೆ ನೀರು ಕೊಡಲಾಗುತ್ತದೆ;	ಕಾರಂಜಾ ಜಲಾಶಯದಿಂದ ನೀರಾವರಿಗೆ ಮತ್ತು ಕುಡಿಯುವ ಸಲುವಾಗಿ ನೀರನ್ನು ನೀಡಲಾಗುತ್ತಿದ್ದು, ಒಟ್ಟು 29227 ಹೆಕ್ಟೇರ್ ಜಮೀನಿಗೆ ನೀರಾವರಿ ಯೋಜಿಸಲಾಗಿದ್ದು, ಇಲ್ಲಿಯವರೆಗೆ 25,737 ಹೇ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಸೃಜಿಸಲಾಗಿದೆ.
ಇ)	ಕುಡಿಯುವ ನೀರಿಗಾಗಿ ಯಾವ ಯಾವ ತಾಲ್ಲೂಕಿನ ನಗರಗಳಿಗೆ ಎಷ್ಟೆಷ್ಟು ನೀರು ಕೊಡಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು);	ಸದರಿ ಜಲಾಶಯದಿಂದ ಕುಡಿಯುವ ನೀರಿಗಾಗಿ ಈ ಕೆಳಗಿನಂತೆ ನೀರನ್ನು ಒದಗಿಸಲಾಗುತ್ತಿದೆ. 1. ಬೀದರ ನಗರಕ್ಕೆ — 0.387 ಟಿ.ಎಂ.ಸಿ. 2. ಭಾಲ್ಕಿ ಪಟ್ಟಣಕ್ಕೆ — 0.300 ಟಿ.ಎಂ.ಸಿ. 3. ಹುಮನಾಬಾದ ಮತ್ತು ಚಿಟಗುಪ್ಪಾ ಪಟ್ಟಣಗಳಿಗೆ — 0.300 ಟಿ.ಎಂ.ಸಿ. 4. ಕಮಠಾಣಾ ಹಾಗೂ ಇತರ ಹಳ್ಳಿಗಳಿಗೆ — 0.0182 ಟಿ.ಎಂ.ಸಿ. (ಪ್ರತಿ ವರ್ಷಕ್ಕೆ) ಒಟ್ಟು — **1.0052** ಟಿ.ಎಂ.ಸಿ.
ಈ)	ಹೊಸದಾಗಿ ಕುಡಿಯುವ ನೀರಿಗೆ ಗ್ರಾಮಾಂತರ ಹಾಗೂ ನಗರಗಳಿಂದ ಬಂದಿರುವ ಬೇಡಿಕೆಗಳೆಷ್ಟು; ಎಷ್ಟು ಮಂಜೂರು ಮಾಡಲಾಗಿದೆ;	ಹೊಸದಾಗಿ ಕುಡಿಯುವ ನೀರಿನ ಸಲುವಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೀದರ ಇವರಿಂದ ಒಂದು ಬೇಡಿಕೆ ಬಂದಿರುತ್ತದೆ. ಸದರಿ ಪ್ರಸ್ತಾವನೆಯು ನಿಗಮದ ಮಟ್ಟದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಉ)	ತಡೆ ಹಿಡಿಯಲಾಗಿರುವ ಬೇಡಿಕೆಗಳಾವುವು; ತಡೆಹಿಡಿಯಲು ಕಾರಣವೇನು? (ವಿವರ ನೀಡುವುದು)	

ಸಂಖ್ಯೆ:ಜಸಂಇ 46 ಎಂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು